**(ದಿನಾಂಕಃ 28-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)**

**ಮುಂದುವರೆದ ಪಾಟೀಸವಾಲು : ಪ್ರತಿವಾದಿ ಪರ ಶ್ರೀ. ಎ ಎಮ್ ವಿ ವಕೀಲರಿಂದ -**

ನಾವು ಮನೆ ಕಟ್ಟಿ 25-30 ವರ್ಷಗಳಾಗಿವೆ . ಹೊಳೆಪ್ಪ ಮತ್ತೊಂದು ಮನೆ ಕಟ್ಟಿದ್ದಾನೆ ಎಂದರೆನಿಜ. ಹೊಳೆಪ್ಪ ಮನೆ ಕಟ್ಟಿ 50 ವರುಷ ಆಗಿದೆ ಎಂದರೆ ಸಾಕ್ಷಿಯು ಅದು ನಮ್ಮ ಅಜ್ಜನ ಕಾಲದಲ್ಲಿ ಕಟ್ಟಲಾಗಿದೆ ಎಂದು ಹೆಳುತ್ತಾರೆ . ಅದೇರೀತಿ ಲಕ್ಕಪ್ಪ ಸಹ ಬೇರೆ ಮನೆ ಕಟ್ಟಿದ್ದಾರೆ ಎಂದರೆ ನಿಜ. ನನ್ನ ಆಧಾರ ಕಾರ್ಡ, ವೊಟಿನ ಕಾರ್ಡ ಹಾಗೂ ನನ್ನ ತಂದೆಯ ಆಧಾರ ಕಾರ್ಡ ವೊಟಿನ ಕಾರ್ಡ ಬೇರೆ ಬೇರೆ ಇದೆ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ನನ್ನ ಆಧಾರ ಕಾರ್ಡ ಬೇರೆ ಬೇರೆ ಇದೆ ಎಂದರೆ ನಿಜ. ಲಕ್ಕಪ್ಪ ಮತ್ತು ಆತನ ಹೆಂಡತಿ ಮಕ್ಕಳು ಆಧಾರ ಕಾರ್ಡ ವೊಟಿನ ಕಾರ್ಡ ಬೇರೆ ಬೇರೆ ಇದೆ ಎಂದರೆ ನಿಜ. ಇಂದ್ರವ್ವಾ ಮತ್ತು ವಂದನಾ ಬೆಳಗಾವಿಯಲ್ಲಿ ತಮ್ಮ ಗಂಡನ ಮನೆಯಲ್ಲಿ ಇರುತ್ತಾರೆ ಎಂದರೆ ನಿಜ. ನನ್ನ ಕಾಕ ಅಲ್ಲೆ ಇರುತ್ತಾರೆ ಎಂದರೆ ನಿಜ. ಇಂದ್ರವ್ವಾ ಮತ್ತು ವಂದನಾ ಇವರ ಮದುವೆ ಖರ್ಚು ವೆಚ್ಚ ಲಕ್ಕಪ್ಪ ವಹಿಸಿದ ಎಂದರೆ ನಿಜ. ಅ ವರ ಮದುವೆ ಸಮಯದಲ್ಲಿ ಮದುವೆ ಖರ್ಚನ್ನು ನಾನುಕೊಟ್ಟಿಲ್ಲ . ನನ್ನ ಮದುವೆ ಸಮಯದಲ್ಲಿ ನನ್ನ ಕಾಕ ಲಕ್ಕಪ್ಪ ನನ್ನ ಮದುವೆಯ ಖರ್ಚು ಕೊಟ್ಟಿಲ್ಲ. ನನ್ನ ಮದುವೆಯಾಗಿ ಎಷ್ಟು ಆಗಿದೆ ನನಗೆ ನೆನಪಿಲ್ಲ. ನನ್ನ ಮಗ ಈ ಗ ದೊಡ್ಡವನಿದ್ದಾನೆ. ಆತನಿಗೆ 2-3 ವರುಷಗಳ ಹಿಂದೆ ಮದುವೆ ಮಾಡಿದ್ದೆನೆ. ಆತನ ಶಿಕ್ಷಣ ಮತ್ತು ಮದುವೆಗೆ ನಾನು ಸ್ವಂತ ಹಣ ಖರ್ಚು ಮಾಡಿದ್ದೆನೆ ಎಂದರೆ ನಿಜ. ನನ್ನ ಮಕ್ಕಳ ಶಿಕ್ಷಣಕ್ಕೆ ಇಂದ್ರವ್ವಾ ಮತ್ತು ವಂದನಾ ಯಾವುದೇ ಹಣ ಸಹಾಯ ಮಾಡಿಲ್ಲ ಎಂದರೆ ನಿಜ. ನನ್ನ ಮನೆತನದ ಖರ್ಚುವೆಚ್ಚ ಮತ್ತು ಲಕ್ಕಪ್ಪನ ಮನೆತನದ ಖರ್ಚು ವೆಚ್ಚ ಬೇರೆ ಬೇರೆ ಇರುತ್ತದೆ ಎಂದರೆ ನಿಜ. ನನ್ನ ತಂದೆ ಮತ್ತು ನನ್ನ ಕಾಕ ಬೇರೆ ಬೇರೆ ವ್ಯವಹಾರ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಂದೆ ಮತ್ತು ನನ್ನ ಕಾಕ ಲಕ್ಕಪ್ಪ ಈಗ 30-40 ವರುಷಗಳ ಹಿಂದೆ ಕೂಡ ವ್ಯವಹಾರ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ನಾನು, ಇಂದ್ರವ್ವಾ ಮತ್ತು ವಂದನಾ ಕೂಡಿ ಇದುವರೆಗೂ ಯಾವುದೇ ವ್ಯವಹಾರ ಮಾಡಿಲ್ಲ.

2.ಲಕ್ಷ್ಮಣ ನ ಹೆಂಡತಿ ಲಕ್ಕವ್ವಾ ನನಗೆ ಗೊತ್ತಿಲ್ಲ. ಅದೇ ರೀತಿ ಮಲಪ್ರಭಾ ನನಗೆ ಗೊತ್ತಿಲ್ಲ. ಮಲಪ್ರಭಾ ಮತ್ತು ಕಲ್ಲವ್ವಾ ಲಕ್ಕವ್ವ ನ ಮಗಳಾಗಬೇಕು. ಲಕ್ಕವ್ವಾ ಇವರ ಮನೆತನದ ಹಾಗೂ ನಮ್ಮ ಮನೆತನದ ನಡುವೆ 40-50 ವರುಷಗಳ ಹಿಂದೇ ಯಾವುದೇ ಕೂಡಿ ವ್ಯವಹಾರ ಆಗಿಲ್ಲ. ಲಕ್ಕವ್ವ ಇವರ ಮಗಳ ಮದುವೆಗೆ ನಾನು ಹಣ ಸಹಾಯ ಮಾಡಿಲ್ಲ. ನನ್ನ ತಂದೆ ಸಹ ಯಾವುದೇ ಹಣದ ಸಹಾಯ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಜಮೀನದ ಉತ್ಪನ್ನದಿಂದ ಲಕ್ಕವ್ವ ಅಥವಾ ಅವರ ಮನೆತನದ ಯಾವುದೇ ಸದಸ್ಯರ ಮದುವೆ ಮಾಡಿದ ಬಗ್ಗೆ ನನಗೆ ಇದುವರೆಗೆ ಮಾಹಿತಿ ಇಲ್ಲ.

3. ಲಕ್ಷ್ಮಿಬಾಯಿ ನನ್ನ ಅತ್ತಿ ಆಗಬೇಕು. ಅವರು ಜೀವಂತ ಇದ್ದಾಗ ಅವರ ಮನೆತನದ ನಡುವೆ ಹಾಗೂ ನಮ್ಮಮನೆತನದ ನಡುವೆ ಒಟ್ಟಿಗೆ ಯಾವುದೇ ವ್ಯವಹಾರ ಆಗಿಲ್ಲ. ಲಕ್ಷ್ಮೀಬಾಯಿ ತೀರಿಕೊಂಡು ಎಷ್ಟು

ವರುಷ ಆಗಿದೆ ಎಂದು ನನಗೆ ಗೊತ್ತಿಲ್ಲ. ಲಕ್ಷ್ಮೀಬಾಯಿ ಯವರ ಮಕ್ಕಳ ಮದುವೆ ಅವರೇ ಸ್ವತಃ ಖರ್ಚಿನಿಂದ ಮಾಡಿದ್ದಾರೆ ಎಂದರೆ ನಿಜ, ಆ ಮದುವೆಗೆ ನಾವು ಯಾವುದೇ ಹಣ ಸಹಾಯ ಮಾಡಿಲ್ಲ ಎಂದರೆ ನಿಜ. ನಾನು ನನ್ನ ಜಮೀನಿನ ಉತ್ಪನ್ನವನ್ನು ಲಕ್ಷ್ಮಿಬಾಯಿ ಮತ್ತು ಅವರ ಮನೆತನದವರಿಗೆ ಕೊಟ್ಟಿಲ್ಲ. ಹೊಳೆಪ್ಪ ನನಗೆ ದೊಡ್ಡಪ್ಪ. ಹೊಳೆಪ್ಪ ಸತ್ತು ಎಷ್ಟು ವರುಷ ಆಗಿವೆ ಎಂದರೆ ನನಗೆ ಗೊತ್ತಿಲ್ಲ. ಲಗಮವ್ವಾ ಜೀವಂತ ಇರುತ್ತಾಳೆ. ಕಾಡಪ್ಪಾ ಹೊಳೆಪ್ಪನ ಮಗ ಎಂದರೆ ನಿಜ. ಲಗಮವ್ವ ಮತ್ತು ಕಾಡಪ್ಪ ಇವರಿಗೆ ಮದುವೆಯಾಗಿ ಅವರಿಗೆ ಮಕ್ಕಳು ಇದ್ದಾರೆ ಎಂದರೆ ನಿಜ. ಲಗಮವ್ವ ಮತ್ತು ಕಾಡಪ್ಪ ಇವರ ಮದುವೆ, ಶಿಕ್ಷಣಕ್ಕೆ ನನ್ನ ಮನೆತನದವರು ಯಾವುದೇ ಹಣ ಸಹಾಯ ಮಾಡಿಲ್ಲ. ಹೊಳೆಪ್ಪ ತನ್ನ ಜಮೀನಿನ ಉತ್ಪನ್ನದಿಂದ ತನ್ನ ಮಕ್ಕಳ ಮದುವೆ ಮತ್ತು ಶಿಕ್ಷಣಕ್ಕೆ ಖರ್ಚು ಮಾಡಿದ್ದಾನೆ ಎಂದರೆ ನಿಜ. ವಾದಿ ಮತ್ತು ಪ್ರತಿವಾದಿಯರ ಆಧಾರ ಕಾರ್ಡ ಮತ್ತು ವೊಟಿಂಗ ಕಾರ್ಡಗಳು ಬೇರೆ ಬೇರೆ ಇದೆ ಎಂದರೆ ನಿಜ.

**ಪ್ರತಿವಾದಿಯರ ವಕೀಲರ ಕೋರಿಕೆಯ ಮೇರೆಗೆ ವಾಟೀಸವಾಲು ಮೂಂದೂಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೇ ಸರಿ ಅದೇ**

**(ಆದಿತ್ಯ ಆರ್. ಕಲಾಲ್)**
**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**